133 (135) ಶ್ರೀ ಡಿ ಆರ್ ಪಾಟೀಲ್ (ಗದಗ್) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಜ್ಯದಲ್ಲಿ ಕೇಂದ್ರ ಸರ್ಕಾರ ಯೋಜಿಸಿರುವ Horticulture Mission ಯೋಜನೆಯ ಲಾಭ ಪಡೆಯುತ್ತಿರುವ ಜಿಲ್ಲೆಗಳಾವುವು ,

ಆ) ಈ ಕಾರ್ಯಕ್ರಮ ಆಯಾ ಜಿಲ್ಲೆಗಳಲ್ಲಿ ಅನುಷ್ಠಾನಗೊಂಡಿದ್ದು ಯಾವಾಗ ,

ಇ) ಉಳಿದ ಜಿಲ್ಲೆಗಳಿಗೆ ಈ ಯೋಜನೆಯನ್ನು ಅಳವಡಿಸಲು ಇರುವ ತೊಂದರೆಗಳೇನು ,

ಈ) ಸರ್ಕಾರ ಈ ಯೋಜನೆಯನ್ನು ಹಳೆ ಧಾರವಾಡ ಜಿಲ್ಲೆಗೆ ಅಳವಡಿಸಲು ಕ್ರಮ ಕೈಗೊಳ್ಳುವುದೇ (ಗದಗ, ಹಾವೇರಿ ಹಾಗೂ ಧಾರವಾಡ ಜಿಲ್ಲೆಗಳಲ್ಲಿ) ,

ಉ) ಇಲ್ಲಿಯವರೆಗೆ ಈ ಯೋಜನೆಯ ಅಳವಡಿಕೆಯಿಂದ ಲಾಭಪಡೆದಿರುವ ರೈತರೆಷ್ಟು , (ಜಿಲ್ಲಾವಾರು ಮಾಹಿತಿ ನೀಡುವುದು) ,

ಊ) ನೀರಾವರಿ ಸೌಲಭ್ಯ ಹೊಂದಿರುವ ಪ್ರದೇಶಗಳಲ್ಲಿ ಸಾವಯವ ಕೃಷಿ ಹಾಗೂ ಪಾಳೇಕರ ಕೃಷಿ ಪದ್ಧತಿ ಅನುಸರಿಸುವ ರೈತರ ಸಂಖ್ಯೆ ಎಷ್ಟು ಹಾಗೂ ಅವರ ಅನುಭವಗಳೇನು (ಜಿಲ್ಲಾವಾರು ಮಾಹಿತಿ ನೀಡುವುದು) ?

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ (ತೋಟಗಾರಿಕೆ ಸಚಿವರು)

ಅ) ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಿಂದ ಲಾಭಪಡೆಯುತ್ತಿರುವ ಜಿಲ್ಲೆಗಳು ಬೆಂಗಳೂರು (ಗ್ರಾಮಾಂತರ), ತುಮಕೂರು, ಮೈಸೂರು, ಕೋಲಾರ, ಚಿತ್ರದುರ್ಗ, ಬೆಳಗಾಂ, ಬಾಗಲುಕೋಟೆ, ಬಿಜಾಪುರ, ಕೊಡಗು, ಕೊಪ್ಪಳ, ಹಾಸನ, ಗುಲ್ಬರ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಮತ್ತು ಚಿಕ್ಕಮಗಳೂರು

ಆ) ಮಾರ್ಚಿ 2006ರಿಂದ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ಅನುಷ್ಠಾನ ಬೆಂಗಳೂರು (ಗ್ರಾಮಾಂತರ), ತುಮಕೂರು, ಮೈಸೂರು, ಕೋಲಾರ, ಚಿತ್ರದುರ್ಗ, ಬೆಳಗಾಂ, ಬಾಗಲಕೋಟೆ, ಬಿಜಾಪುರ, ಕೊಡಗು, ಕೊಪ್ಪಳ, ಹಾಸನ, ಗುಲ್ಬರ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕೈಗೊಳ್ಳಲಾಗಿದೆ 2006–07ನೇ ಸಾಲಿನಲ್ಲಿ ಈ ಜಿಲ್ಲೆಗಳ ಜೊತೆಗೆ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳನ್ನು ಸೇರಿಸಲಾಗಿದೆ

ಇ) ಜಿಲ್ಲೆಗಳನ್ನು ಆಯ್ಕೆ ಮಾಡುವ ಅಧಿಕಾರವು ರಾಷ್ಟ್ರೀಯ ತೋಟಗಾರಿಕೆ ಮಿಷನ್, ನವದೆಹಲಿಯು ಹೊಂದಿರುತ್ತದೆ

ಈ) ಅಂತಹ ಪ್ರಸ್ತಾಪವು ಸರ್ಕಾರದ ಪರಿಗಣನೆಯಲ್ಲಿ ಇರುವುದಿಲ್ಲ

ಊ) ವಿವರ ಕೆಳಕಂಡಂತೆ ಇರುತ್ತದೆ

ಕ್ರ ಸಂ	ಜಿಲ್ಲೆಗಳ ಹೆಸರು	2005–06	2006–07
1	ಬೆಂಗಳೂರು (ಗ್ರಾಮ)	482	376
2	ಚಿತ್ರದುರ್ಗ	929	50
3	ಕೋಲಾರ	2499	51
4	ಶಿವಮೊಗ್ಗ	579	657
5	ತುಮಕೂರು	4853	1387
6	ಮೈಸೂರು	3358	500
7	ಚಿಕ್ಕಮಗಳೂರು	67	–
8	ದಕ್ಷಿಣ ಕನ್ನಡ	1270	–
9	ಬೆಳಗಾವಿ	2100	195
10	ಬಿಜಾಪುರ	400	50
11	ಉತ್ತರ ಕನ್ನಡ	4966	135
12	ಬಾಗಲಕೋಟೆ	700	229
13	ಗುಲ್ಬರ್ಗ	228	93
14	ಉಡುಪಿ	1647	274
15	ಕೊಪ್ಪಳ	151	201
16	ಹಾಸನ	700	357
17	ಕೊಡಗು	2605	18
	ಒಟ್ಟು	27534	4573

ಊ) ರಾಜ್ಯದಲ್ಲಿ ಸಾವಯವ ಕೃಷಿಯನ್ನು ಸುಮಾರು 1995 ರೈತರು ಹಾಗೂ ಪಾಳೇಕರ ಕೃಷಿ ಪದ್ಧತಿಯನ್ನು ಸುಮಾರು 35 ರೈತರು ಅನುಸರಿಸುತ್ತಿದ್ದಾರೆ (ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ)

ಸಾವಯವ ಕೃಷಿ ಪದ್ಧತಿಯನ್ನು ಅನುಸರಿಸುತ್ತಿರುವ ಬಹುತೇಕ ರೈತರ ಜೀವಾಮೃತ ಮತ್ತು ಬೀಜಾಮೃತಗಳನ್ನು ಸಹ ಬಳಸುತ್ತಿದ್ದಾರೆ ಹಾಗೆಯೇ ನೈಸರ್ಗಿಕ ಕೃಷಿಯನ್ನು ಅನುಸರಿಸುತ್ತಿರುವ ಬಹುತೇಕ ರೈತರು

ಸಾವಯವ ಗೊಬ್ಬರಗಳನ್ನು ಸಹ ಬಳಸುತ್ತಿದ್ದಾರೆ ಒಟ್ಟಾರೆ ಎರಡೂ ಪದ್ಧತಿಗಳ ಮೂಲ ತತ್ವ ಹಾಗೂ ಉದ್ದೇಶಗಳು ಒಂದೇ ಆಗಿರುವುದಾಗಿ ಬಹುತೇಕ ರೈತರು ತಮ್ಮ ಅನುಭವವನ್ನು ವ್ಯಕ್ತಪಡಿಸಿರುತ್ತಾರೆ

ಕ್ರ ಸಂ	ಜಿಲ್ಲೆ	ಸಾವಯವ ಕೃಷಿ ಪದ್ಧತಿ ಅನುಸರಿಸುತ್ತಿರುವ ರೈತರ ಸಂಖ್ಯೆ (ಅಂದಾಜು)	ನೈಸರ್ಗಿಕ ಕೃಷಿ ಪದ್ಧತಿ ಅನುಸರಿಸುತ್ತಿರುವ ರೈತರ ಸಂಖ್ಯೆ (ಅಂದಾಜು)
1	ಬೆಂಗಳೂರು (ಗ್ರಾ)	15	–
2	ತುಮಕೂರು	127	7
3	ಕೋಲಾರ	410	–
4	ಚಿತ್ರದುರ್ಗ	6	3
5	ಮೈಸೂರು	20	6
6	ಹಾಸನ	110	–
7	ಕೊಡಗು	1	–
8	ದಕ್ಷಿಣ ಕನ್ನಡ	108	1
9	ಉಡುಪಿ	181	–
10	ಕೊಪ್ಪಳ	103	–
11	ಗುಲ್ಬರ್ಗ	3	1
12	ಬಿಜಾಪುರ	122	3
13	ಬಾಗಲಕೋಟೆ	24	1
14	ಬೆಳಗಾಂ	21	5
15	ಉತ್ತರ ಕನ್ನಡ	94	–
16	ಬೆಂಗಳೂರು (ನಗರ)	17	–
17	ದಾವಣಗೆರೆ	208	–
18	ಶಿವಮೊಗ್ಗ	124	–
19	ಮಂಡ್ಯ	52	2
20	ಚಾಮರಾಜನಗರ	8	1
21	ಚಿಕ್ಕಮಗಳೂರು	3	3

ಕ್ರ ಸಂ	ಜಿಲ್ಲೆ	ಸಾವಯವ ಕೃಷಿ ಪದ್ಧತಿ ಅನುಸರಿಸುತ್ತಿರುವ ರೈತರ ಸಂಖ್ಯೆ (ಅಂದಾಜು)	ನೈಸರ್ಗಿಕ ಕೃಷಿ ಪದ್ಧತಿ ಅನುಸರಿಸುತ್ತಿರುವ ರೈತರ ಸಂಖ್ಯೆ (ಅಂದಾಜು)
22	ದಾವರಾಡ	11	–
23	ಗದಗ್	103	–
24	ಹಾವೇರಿ	16	–
25	ಬಳ್ಳಾರಿ	11	–
26	ಬೀದರ್	87	2
27	ರಾಯಚೂರು	10	–
	ಒಟ್ಟು	1995	35

135 (256) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಟ್ರ್ಯಾಕ್ಟರ್‌ಗಳಿಗೆ ನೀಡುವ ಸಬ್ಸಿಡಿ ಯೋಜನೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಸಬ್ಸಿಡಿ ಪಡೆಯಲು ಜೇಷ್ಠತಾ ಪಟ್ಟಿ ಪರಿಗಣಿಸಲಾಗುವುದೇ ಹಾಗೂ ತಯಾರಿಸಲಾಗಿದೆಯೇ ಹಾಗೂ ತಯಾರಿಸಲಾಗುವುದೇ ,

ಇ) ಸಬ್ಸಿಡಿಯನ್ನು ಜೇಷ್ಠತಾ ಪಟ್ಟಿಯನುಸಾರವಾಗಿ ನೀಡಲಾಗಿದೆಯೇ , ಇಲ್ಲದಿದ್ದಲ್ಲಿ ಕಾರಣವೇನು (ವಿವರ ನೀಡುವುದು) ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು)

ಅ) ಇಲ್ಲ

ಆ) ಹೌದು, ಜೇಷ್ಠತಾ ಪಟ್ಟಿಗಳನ್ನು ತಾಲ್ಲೂಕು ಮಟ್ಟದಲ್ಲಿ ತಯಾರಿಸಲಾಗಿದೆ

ಇ) ಹೌದು

136 (434) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ತೋಟಗಾರಿಕೆ ಇಲಾಖೆಯು ಹೊಂದಿರುವ ಜಮೀನಿನ ಒಟ್ಟು ವಿಸ್ತೀರ್ಣ ಎಷ್ಟು ,